# ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ : ೧೯೧೫

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೮೬೭
http://www.kasapa.in e-mail : kannadaparishattu@gmail.com

ಕ್ರಮಸಂಖ್ಯೆ : ಕಸಾಪ / ಪತ್ರಿಕಾ ಪ್ರಕಟಣೆ / ೨೦೨೧–೨೨ ದಿನಾಂಕ : ೧೧–೦೪–೨೦೨೨



ಇವರಿಗೆ

ಸಂಪಾದಕರು / ಮುಖ್ಯ ವರದಿಗಾರರು
.........................................ಬೆಂಗಳೂರು

ಮಾನ್ಯರೆ,

**ಪತ್ರಿಕಾ ಹೇಳಿಕೆ – ಪ್ರಕಟಣೆ ಕೃಪೆಗಾಗಿ**

## ಕನ್ನಡ ಸಾಹಿತ್ಯ ಪರಿಷತ್ತಿನಿಂದ
## ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ
## ಡಾ. ನಿರ್ಮಲಾ ಸಿ. ಎಲಿಗಾರ ಅವರಿಗೆ
## “ಪಂಕಜಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿ”

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ **ದಿನಾಂಕ ೦೬–೦೪–೨೦೨೨** ರಂದು **ನಾಡೋಜ ಡಾ. ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ** ನಡೆದ ಆಯ್ಕೆ ಸಮಿತಿ ಸಭೆಯಲ್ಲಿ **೨೦೨೨ನೆಯ ಸಾಲಿನ “ಪಂಕಜಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿ”**ಗೆ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ **ಡಾ. ನಿರ್ಮಲಾ** ಸಿ. **ಎಲಿಗಾರ** ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಪ್ರಶಸ್ತಿಯ ಮೊತ್ತ **ರೂ. ೧೦,೦೦೦ (ಹತ್ತು ಸಾವಿರ ಮಾತ್ರ)** ನಗದು. ಇದರ ಜೊತೆಗೆ ಸ್ಮರಣಿಕೆ ಹಾಗೂ ಫಲ ತಾಂಬೂಲಗಳನ್ನೂ ಒಳಗೊಂಡಿರುತ್ತದೆ.

ಶ್ರೀಮತಿ ನಿರ್ಮಲಾ ಸಿ. ಎಲಿಗಾರ ಅವರು ಜೂನ್ ೬ ೧೯೬೫ರಲ್ಲಿ ಧಾರವಾಡದಲ್ಲಿ ಜನಿಸಿದರು. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಅರ್ಥಶಾಸ್ತ್ರ ಹಾಗೂ ಗಣಿತ ಸಂಖ್ಯಾಶಾಸ್ತ್ರಗಳಲ್ಲಿ ಎಂ.ಎ. ಪದವಿ ಪಡೆದ ಇವರು, ಧಾರವಾಡದ ನ್ಯಾಷನಲ್ ಪಿಯು ಕಾಲೇಜಿನಲ್ಲಿ ೨ ವರ್ಷಗಳ ಕಾಲ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅಲ್ಲದೆ, ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ತರಬೇತಿ, ಕಾರ್ಯಾಗಾರ ಹಾಗೂ ಸಮ್ಮೇಳನಗಳಲ್ಲಿ, ದಸರಾ ಕವಿಗೋಷ್ಠಿ, ಹಂಪಿ ಉತ್ಸವ, ಕಿತ್ತೂರು ಉತ್ಸವ, ದೇಸಿ ಉತ್ಸವ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಉಪನ್ಯಾಸ ನೀಡಿದ ಅನುಭವವಿರುತ್ತದೆ. ನಾಕಾಣೆ, ಕೌದಿ, ಕಸೂತಿ, ವ್ಯಕ್ತಿ ಚಿತ್ರಗಳು, ಗರಿ ಅನನ್ಯ ಸಾಧಕಿಯರ ೩ ಸಂಪುಟಗಳು ಅಲ್ಲದೆ, ಪಿ.ಯು.ಸಿ. ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಉದ್ಯೋಗ ವಾಹಿನಿ ನಿರುದ್ಯೋಗಿ ಗ್ರಾಮೀಣ ಯುವಕರಿಗಾಗಿ ಸ್ವಯಂ ಉದ್ಯೋಗ, ತರಂಗ, ಸಂಕ್ರಮಣ ಮಿತ್ರ, ಯುವಕರ್ನಾಟಕ,

ಕನ್ನಡ ಪ್ರಭ, ಕರ್ನಾಟಕ ವಿಕಾಸ ಯೋಜನಾ, ನಿಯತಕಾಲಿಕೆಗಳಲ್ಲಿ ಲೇಖನಗಳು ಪ್ರಕಟವಾಗಿವೆ. ಗಣ್ಯ ವ್ಯಕ್ತಿಗಳ ಸಾಧನೆ ಕುರಿತ ಕಿರುಸಾಕ್ಷ್ಯರೂಪಕಗಳನ್ನು ಮಾಡಿರುತ್ತಾರೆ.

ಪಂಕಜಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿ ಆಯ್ಕೆ ಸಮಿತಿಯ ಸಭೆಯಲ್ಲಿ ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ **ಶ್ರೀ ನೇ.ಭ ರಾಮಲಿಂಗಶೆಟ್ಟಿ,** ಗೌರವ ಕೋಶಾಧ್ಯಕ್ಷರಾದ **ಶ್ರೀ ಬಿ.ಎಂ. ಪಟೇಲ್‌ಪಾಂಡು** ಅವರುಗಳು ಉಪಸ್ಥಿತರಿದ್ದರು.

**ಡಾ. ನಿರ್ಮಲಾ ಸಿ. ಎಲಿಗಾರ ಅವರಿಗೆ ಸಂದ ಪ್ರಶಸ್ತಿಗಳು :**

೧. ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ

೨. ಚಾಲುಕ್ಯ ಪ್ರಶಸ್ತಿ

೩. ಆರ್ಯಭಟ ಪ್ರಶಸ್ತಿ

೪. ಮಾಧ್ಯಮ ಸಿರಿ ಪ್ರಶಸ್ತಿ

೫. ಸಿರಿಗನ್ನಡ ರಾಜ್ಯೋತ್ಸವ ಪ್ರಶಸ್ತಿ

೬. ಓನಕೆ ಓಬವ್ವ ಪ್ರಶಸ್ತಿ ಇನ್ನು ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

**(ನೇ.ಭ. ರಾಮಲಿಂಗಶೆಟ್ಟಿ)**
ಗೌರವ ಕಾರ್ಯದರ್ಶಿಗಳು

---

ದಯವಿಟ್ಟು ಇದನ್ನು ರಾಜ್ಯಮಟ್ಟದ ಸುದ್ದಿಯಾಗಿ ಪ್ರಕಟಿಸಲು ಕೋರಿದೆ.